ಸರ್ಕಾರ ತಮ್ಮನ್ನು ಇಲ್ಲಿಗೆ ಕಳುಹಿಸಿತ್ತು; ಇವರ ಸಿ.ಆರ್.ನಲ್ಲಿ ಕೆಟ್ಟ ಟಿಪ್ಪಣಿಗಳಿದ್ದವು, ಇವರ ಬೋಧನೆ ಉತ್ತಮವಾಗಿಲ್ಲದ್ದರಿಂದ ಇವರ ಇನ್‌ಕ್ರಿಮೆಂಟನ್ನು ತಡೆ ಹಿಡಿಯಲಾಗಿತ್ತು. ಜಿಲ್ಲಾ ಕಚೇರಿಯ ಕೆಂಪು ಪುಸ್ತಕದಲ್ಲಿ ಈಗಲೂ ಈ ಮೇಸ್ಟ್ರ ಹೆಸರು ಸೋಮಾರಿ ಶಿಕ್ಷಕರೆಂದು ನಮೂದಾಗಿತ್ತು.

ಈಗ ಲಾಮೂ ಭಾಯಿಯವರಿಗೆ ಮೇಸ್ಟ್ರ ಬಗ್ಗೆ ಹೇಳಲು ಏನೂ ಉಳಿದಿರಲಿಲ್ಲ. ಅವರ ಶೂನ್ಯತೆ ಮಾಯವಾಗಿತ್ತು.

'ಅಣ್ಣಾ, ವಾರ್ಷಿಕ ಪರೀಕ್ಷೆ ಯಾವಾಗ ಆರಂಭವಾಗುವುದು?' ಮೇಸ್ಟ್ರು ನಿರೀಕ್ಷಕರನ್ನು ವಿಚಾರಿಸಿದರು.

'ನಾನು ನಿಮಗೆ ಬರೆದು ಕಳಿಸ್ತೀನಿ.'

'ಸರಿ.'

ವಾರ್ಷಿಕ ಪರೀಕ್ಷಾ ವೇಳಾ ಪಟ್ಟಿ ಬಸಂತರಾಯ್ ಮೇಸ್ಟ್ರಿಗೆ ತಲುಪಿತು. ಅವರು ಎಲ್ಲಾ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಅಂದು ಅವರು ಒಂದು ಜೀಪ್ ಶಾಲೆಯೆಡೆಗೆ ಬರುತ್ತಿರುವುದನ್ನು ನೋಡಿದರು. ಜೀಪ್ ಶಾಲೆಯ ಬಳಿಗೆ ಬಂದು ನಿಂತಿತು. ಲಾಮೂ ಭಾಯಿ, ಆಡಳಿತಾಧಿಕಾರಿಗಳು ಮತ್ತು ಜಿಲ್ಲಾ ಶಿಕ್ಷಣ ಸಮಿತಿಯ ಅಧ್ಯಕ್ಷರು ಜೀಪಿನಿಂದ ಇಳಿದರು.

ಬಸಂತರಾಯ್ ಮೇಸ್ಟ್ರ ಇಡೀ ಶರೀರ ಕಂಪಿಸಿತು.

ಎಲ್ಲಾ ಅಧಿಕಾರಿಗಳು ಬಂದು ಶಾಲೆಯೊಳಗೆ ಕೂತರು.

'ಸಾರ್,' ಲಾಮೂ ಭಾಯಿಯವರು ಆಡಳಿತಾಧಿಕಾರಿಗಳು ಮತ್ತು ಅಧ್ಯಕ್ಷರನ್ನು ಉದ್ದೇಶಿಸಿ ಹೇಳಿದರು, 'ಇವರೇ ಮೇಸ್ಟ್ರು...ಈ ಶಾಲೆಗೆ ಇವರ ಕೊಡುಗೆ ಅನನ್ಯವಾಗಿದೆ. ಇಲಾಖೆಯ ರೆಕಾರ್ಡ್‌ನಲ್ಲಿ ಇವರ ಕೆಲಸವನ್ನು ಹಳಿಯಲಾಗಿದೆ, ಆದರೆ ಈಗ ಇವರನ್ನು ಪರೀಕ್ಷಿಸಬಹುದು. ಈಗ ಇವರು ಅತ್ಯುತ್ತಮ ಶಿಕ್ಷಕರಾಗಿದ್ದಾರೆ...ನೀವು ಶಾಲೆಯ ಮಕ್ಕಳನ್ನು ಬೇಕಾದಂತೆ ಪರೀಕ್ಷಿಸಬಹುದು.' ಲಾಮೂ ಭಾಯಿಯವರ ಮಾತಿನಲ್ಲಿ ಆತ್ಮವಿಶ್ವಾಸವಿತ್ತು.

ಅಧಿಕಾರಿಗಳು ಮಕ್ಕಳಿಗೆ ಕಠಿಣ ಪರೀಕ್ಷೆಯನ್ನು ಮಾಡಿದರು. ಎಲ್ಲಾ ಮಕ್ಕಳು ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಆಡಳಿತಾಧಿಕಾರಿಗಳು ಮತ್ತು ಅಧ್ಯಕ್ಷರಿಗೆ



ಆಶ್ಚರ್ಯವಾಯಿತು. ಅಲ್ಲದೆ ಅವರೇ ನಾಚಿ ತಲೆ ತಗ್ಗಿಸಿದರು. ಮರಳಿ ಹೋಗುವಾಗ ಬಸಂತರಾಯ್ ಮೇಸ್ಟ್ರು ಲಾಮೂ ಭಾಯಿಯವರ ಕೈಯನ್ನು ಹಿಡಿದುಕೊಂಡು ಅವರ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡುತ್ತಾ ಹೇಳಿದರು, 'ಅಣ್ಣಾ, ನಿಮಗೆ ಹೇಗೆ ಕೃತಜ್ಞತೆಯನ್ನು ಅರ್ಪಿಸಲಿ? ನೀವು ನನಗೆ ಬದುಕಲು ಶಕ್ತಿ ಕೊಟ್ಟಿರಿ. ನನ್ನೆದರು ಬದುಕಿನ ಇಂಥ ಮಾರ್ಗವನ್ನು ತೆರೆದಿಟ್ಟಿರಿ...' ಮೇಸ್ಟ್ರ ಮುಖದಲ್ಲಿ ವಿಚಿತ್ರ ಹೊಳಪಿತ್ತು.

'ಕೃತಜ್ಞತೆಯನ್ನು ಹೇಳುವ ಆವಶ್ಯಕತೆಯಿಲ್ಲ. ಇದು ನನ್ನ ಕರ್ತವ್ಯವಾಗಿತ್ತು. ಶಿಕ್ಷಣ ಪದ್ಧತಿಯಿಂದಾಗಿ ಮಕ್ಕಳು ಮಾತ್ರ ಸಮಸ್ಯೆಯಾಗುವುದಿಲ್ಲ. ಈ ಸಮಸ್ಯೆಯನ್ನು ಬಗೆಹರಿಸುವಲ್ಲಿ ನನಗೆ ಸಂತೋಷ ಸಿಗುತ್ತದೆ, ಅದಕ್ಕೇ ನಿಮ್ಮ ಕಣ್ಣುಗಳಲ್ಲಿ ಹೊಳಪನ್ನು ನೋಡುತ್ತಿದ್ದೇನೆ, ನಾನು ಇಂಥ ಹೊಳಪನ್ನು ಪ್ರತಿಯೊಬ್ಬ ಶಿಕ್ಷಕರ ಕಣ್ಣುಗಳಲ್ಲಿ ನೋಡಲು ಬಯಸುತ್ತೇನೆ. ನಾನೇ ನಿಮಗೆ ಆಭಾರಿಯಾಗಿದ್ದೇನೆ...'

ಶಿಕ್ಷಣ ಇಲಾಖೆಯ ನಿರೀಕ್ಷಕರಾದ ಲಾಮಾ ಭಾಯಿ, ಬಸಂತರಾಯ್ ಮೇಸ್ಟ್ರ ಜೀವನದಲ್ಲಿ ಹೊಸ ಚೈತನ್ಯವನ್ನು ತುಂಬಿ ಹೋದರು. ●